## ವಿ ಆರ್ ತ್ರೀ ಲೇಟ್!

ಅಂದು ಹತ್ತನೇ ತರಗತಿಯ ಜಿಲ್ಲಾಮಟ್ಟದ ಪೂರ್ವಸಿದ್ಧತಾ ಪರೀಕ್ಷೆಯ ಮೊದಲ ದಿನ. ಪರೀಕ್ಷೆಯು ಒಂಬತ್ತು ಗಂಟೆ ಮೂವತ್ತು ನಿಮಿಷಕ್ಕೆ ಆರಂಭವಾಗಿತ್ತು. ಪರೀಕ್ಷೆಯ ನಿಯಮದಂತೆ ಅರ್ಧ ಗಂಟೆಯ ನಂತರ ಬರುವ ವಿದ್ಯಾರ್ಥಿಗಳಿಗೆ ಪ್ರವೇಶ ಇರಲಿಲ್ಲ. ನಾನು ಪರೀಕ್ಷಾ ಕೊಠಡಿಯ ಮೇಲ್ವಿಚಾರಕನಾಗಿ ಕರ್ತವ್ಯದಲ್ಲಿದ್ದೆ. ಹತ್ತು ಗಂಟೆಗೆ ಮೂವರು ವಿದ್ಯಾರ್ಥಿಗಳು ಬಂದರು.

ಬಾಗಿಲಲ್ಲಿ ನಿಂತ ಒಬ್ಬ 'ಮೇ ಐ ಗೆಟ್ ಇನ್ ಸಾರ್' ಅಂತ ಕೇಳಿಕೊಂಡ. ತಡವಾಗಿ ಬರೋರಿಗೆ ಅವಕಾಶ ಕೊಟ್ಟರೆ ಅದೇ ಚಾಳಿ ಇತರ ವಿದ್ಯಾರ್ಥಿಗಳಿಗೆ ಅಂಟುಜಾಡ್ಯದ ತರಹ ಹರಡುತ್ತದೆ ಅಂತ ಮನದಲ್ಲೇ ಅಂದುಕೊಂಡು ಖಡಕ್ ವಾರ್ನಿಂಗ್ ಕೊಡಬೇಕು ಅಂತ 'ಯು ಆರ್ ಟೂ ಲೇಟ್' ಅಂತ ಹೇಳಿದೆ. ಅದಕ್ಕೆ ಬಾಗಿಲಲ್ಲಿ ಇದ್ದ ಇನ್ನೊಬ್ಬ ವಿದ್ಯಾರ್ಥಿ 'ಸಾರಿ ಸಾರ್. ವಿ ಆರ್ ತ್ರೀ ಲೇಟ್' ಅಂತ ಮೂವರು ತಡವಾಗಿ ಬಂದಿದ್ದೇವೆ ಅಂತ ಹೇಳಿದ.



**ಮಲ್ಲಿಕಾರ್ಜುನ ಸುರಧೇನುಪುರ**

---

## ಅಜ್ಜಿಯ ಐಡಿಯಾ

ರಾತ್ರಿಯ ಹೊತ್ತು ಆ ಮನೆಯಲ್ಲಿ ಅಜ್ಜಿಯ ಹೊರತುಪಡಿಸಿ ಯಾರೂ ಇಲ್ಲವೆಂದು ಖಚಿತ ಪಡಿಸಿಕೊಂಡ ಕಳ್ಳನೊಬ್ಬ, ಹೇಗೋ ಒಳಗೆ ಪ್ರವೇಶಿಸಿದ. ಕೈಗೆ ಸಿಕ್ಕಿದ್ದನ್ನು ದೋಚಿಕೊಂಡ. ಅದೇ ಸಮಯದಲ್ಲಿ ಆತನಿಗೆ ತುರ್ತಾಗಿ ಪ್ರಕೃತಿ ಕರೆಗೆ ಓಗೊಡಬೇಕಾಗಿ ಬಂದಿತು.

ಕತ್ತಲೆಯಲ್ಲಿ ಆತ ಎಡವಿದ. ಯಾವುದೋ ವಸ್ತು ಬಿದ್ದ ಶಬ್ದಕ್ಕೆ ಅಜ್ಜಿಗೆ ಎಚ್ಚರವಾಗಿ 'ಯಾರಪ್ಪ ನೀನು, ಏನು ಬೇಕಿತ್ತು' ಎಂದು ಕೇಳಿದಾಗ ಆ ಕಳ್ಳ, ಅಜ್ಜಿ ಎದುರು ಪುಟ್ಟ ಚಾಕು ಹಿಡಿದು, 'ಏ.. ಅಜ್ಜೀ ಟಾಯ್ಲೆಟ್ ಎಲ್ಲಿದೆ ಬೇಗ ಹೇಳು' ಎಂದ. ಆಗ ಅಜ್ಜಿ ತಾಳಪ್ಪಾ ಎನ್ನುತ್ತ ಎದ್ದು ಆತನಿಗೆ ಟಾಯ್ಲೆಟ್ ಬಳಿ ಕರೆದೊಯ್ದು 'ಇದೇ ನೋಡು' ಎನ್ನುವಷ್ಟರಲ್ಲಿ ಆತ ರಭಸದಿಂದ ಒಳಗೆ ಹೋಗಿ ಚಿಲಕ ಹಾಕಿ ಕೊಂಡ. ಇತ್ತ ಅಜ್ಜಿ ಹೊರಗಿನಿಂದ ಬಾಗಿಲ ಚಿಲಕ ಹಾಕಿ ಮನೆಯ ಎಲ್ಲ ಲೈಟ್ ಆನ್ ಮಾಡಿ 'ಕಳ್ಳ.. ಕಳ್ಳ' ಎಂದು ಬೊಬ್ಬೆ ಹಾಕಿ ಜನರನ್ನು ಸೇರಿಸಿ ಕಳ್ಳನನ್ನು ಹಿಡಿದು ಕೊಡುವಲ್ಲಿ ಸಫಲಳಾದಳು.

**ಅರವಿಂದ ಜಿ. ಜೋಷಿ**



ಕಲೆ: ಗಣೇಶ ಆಚಾರ್ಯ